# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 790

ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್

(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ: : 11.03.2020

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| ಅ. | ರಾಜ್ಯದಲ್ಲಿ ರೈತರು ಬೆಳೆದ ಬೆಳೆಗಳನ್ನು ಕ್ಷೇತ್ರವಾರು ಸರ್ವೆ ಮೂಲಕವೇ ದಾಖಲಿಸಬೇಕೆಂಬ ಸೂಚನೆಯನ್ನು ಧಿಕ್ಕರಿಸಿ, ಕಛೇರಿಯಲ್ಲಿಯೇ ಅಪ್ಡೇಟ್ ಮಾಡಿದ ಪರಿಣಾಮವಾಗಿ ಹಲವಾರು ರೈತರು ಬೆಂಬಲ ಬೆಲೆ, ಫಸಲ್ ಭೀಮಾ ಮತ್ತಿತರ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: | 2019-20 ನೇ ಸಾಲಿನಲ್ಲಿ ಬೆಳೆ ಸಮೀಕ್ಷೆಯನ್ನು ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಒಟ್ಟು ನಾಲ್ಕು ಹಂತಗಳಲ್ಲಿ ನಡೆಸಲು ಕೃಷಿ ಇಲಾಖೆಯನ್ನು ನೋಡಲ್ ಇಲಾಖೆಯಾಗಿ ಸರ್ಕಾರದ ಆದೇಶ ಸಂ: ಕೃಇ 34 ಕೃಕೈಉ 2019, ದಿ:05-07-2019 ರಲ್ಲಿ ಆದೇಶಿಸಲಾಗಿದೆ. ಬೆಳೆ ಸಮೀಕ್ಷೆಯನ್ನು ಜಿಲ್ಲಾಧಿಕಾರಿಗಳ ನೇರ ಉಸ್ತುವಾರಿಯಲ್ಲಿ ಸಿಆಸುಇ-ಆಡಳಿತ ಇಲಾಖೆಯ ಬೆಳೆ ಸಮೀಕ್ಷೆ ಮೊಬೈಲ್ ಆಪ್ ಬಳಸಿ ಆಯಾ ಗ್ರಾಮದ ವಿದ್ಯಾವಂತ ಯುವಕರು (ಖಾಸಗಿ ನಿವಾಸಿ) ಕೈಗೊಳ್ಳುತ್ತಿದ್ದಾರೆ. ಗ್ರಾಮದ Geo reference GIS ನಕ್ಷೆಗಳನ್ನು ಬಳಸಿಕೊಂಡು ಪ್ರತಿ ಸರ್ವೆ ನಂಬರ ವಾರು ಬೆಳೆ ದಾಖಲಿಸಲಾಗುತ್ತಿದೆ. Geo reference GIS ಗ್ರಾಮ ನಕ್ಷೆಗಳನ್ನು ಬಳಸುತ್ತಿರುವುದರಿಂದ ಖಾಸಗಿ ನಿವಾಸಿ ಸರ್ವೆ ನಂಬರ್ ಒಳಗೆ ಹೋಗಿ ಬೆಳೆ ವಿವರಗಳನ್ನು ದಾಖಲಿಸುವುದು ಕಡ್ಡಾಯವಾಗಿರುತ್ತದೆ. ಇದರಿಂದಾಗಿ ಕಛೇರಿಯಲ್ಲಿಯೇ ಕುಳಿತು ಬೆಳೆ ಮಅಹಿತಿ ದಾಖಲಿಸಲು ಅವಕಾಶವಿರುವುದಿಲ್ಲ. ಖಾಸಗಿ ನಿವಾಸಿಗಳು ದಾಖಲಿಸಿದ ಮಾಹಿತಿಯು ಸರಿಯಾಗಿದೆಯೇ ಎಂದು ಪರಿಶೀಲಿಸಿ ಮೇಲ್ವಿಚಾರಕರು ಅನುಮೋದಿಸುತ್ತಾರೆ. ತಪ್ಪುಗಳು ಕಂಡು ಬಂದಲ್ಲಿ ಅಂತಹ ತಾಕುಗಳನ್ನು ಖಾಸಗಿ ನಿವಾಸಿಗಳ ಮೂಲಕ ಮರು ಸಮೀಕ್ಷೆ ಕೈಗೊಳ್ಳಲಾಗುತ್ತದೆ. |

| | | |
|---|---|---|
| ಆ. | ರಾಜ್ಯದ ರೈತರು ಆಯಾ ಪ್ರದೇಶಕ್ಕೆ ಅನುಗುಣವಾಗಿ ಜಮೀನಿನಲ್ಲಿ ಬೆಳೆದಿರುವ ಬೆಳೆಗಳಾದ ರಾಗಿ, ಜೋಳ, ತೊಗರಿ, ಭತ್ತ, ಶೇಂಗಾ ಮತ್ತಿತರ ಬೆಳೆಗಳನ್ನು ರೈತರು ಬೆಳೆದಿದ್ದರೂ, ಸಮೀಕ್ಷೆಯಲ್ಲಿ ಖಾಲಿ ಜಾಗ ಎಂದು ನಮೂದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು: | ಬೆಳೆ ಸಮೀಕ್ಷೆಗೆ ಖಾಸಗಿ ನಿವಾಸಿಗಳು ತಾಕುಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬಿತ್ತನೆಯಾಗದಿದ್ದಲ್ಲಿ ಅಥವಾ ಕಟಾವು ಆಗಿದ್ದಲ್ಲಿ ಅಂತಹ ತಾಕುಗಳನ್ನು ಕಟಾವಾದ ಪ್ರದೇಶ ಎಂದು ನಮೂದಿಸುತ್ತಾರೆ. ಈ ಬಗ್ಗೆ ರೈತರು ಆಕ್ಷೇಪಣೆ ಸಲ್ಲಿಸಲು ಅವಕಾಶವಿರುತ್ತದೆ. ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಮೇಲ್ವಿಚಾರಕರು ಕ್ಷೇತ್ರ ಭೇಟಿ ನೀಡಿ ಮಹಜರ ಮಾಡಿ ಆಕ್ಷೇಪಣೆಯನ್ನು ಇತ್ಯರ್ಥಪಡಿಸಲು ಅವಕಾಶವಿರುತ್ತದೆ. ಬೆಳೆ ಲಭ್ಯವಿರುವ ಕಡೆ ಬೆಳೆಯನ್ನು ದಾಖಲಿಸಲಾಗುತ್ತದೆ. ರಾಜ್ಯದಲ್ಲಿ ಶೇ.84 ತಾಕುಗಳಲ್ಲಿ ಬೆಳೆ ಲಭ್ಯವಿದ್ದು, ಬಿತ್ತನೆ ಪ್ರದೇಶಕ್ಕೆ ಹೋಲಿಸಿದರೆ ತಾಳೆಯಾಗುತ್ತಿದೆ. |
| ಇ. | ರೈತರು ಬೆಳೆದ ಮುಂಗಾರು ಬೆಳೆಯ ಸಮೀಕ್ಷೆಯ ವರದಿಯು ರೈತರಿಗೆ ಸಂಕಷ್ಟ ತಂದಿದ್ದು, ತಪ್ಪು ಉಲ್ಲೇಖವಾಗಿರುವ ಬೆಳೆಗಳ ಬಗ್ಗೆ ಪರಿಶೀಲನೆ ನಡೆಸುವ ಕಾರ್ಯ ಯಾವ ಹಂತದಲ್ಲಿದೆ? (ವಿವರ ಒದಗಿಸುವುದು) | ಮುಂಗಾರು ಬೆಳೆ ಸಮೀಕ್ಷೆ ಕುರಿತು ರೈತರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ನಿರಂತರವಾಗಿ ಪರಿಶೀಲಿಸಿ ಇತ್ಯರ್ಥಗೊಳಿಸಲಾಗುತ್ತಿದೆ. ಬೆಳೆ ಸಮೀಕ್ಷೆಯಲ್ಲಿ ದಾಖಲಾದ ರೈತರ ತಾಕುಗಳ ವಿವರಗಳ ಪಟ್ಟಿಯನ್ನು ಗ್ರಾಮ ಪಂಚಾಯತಿ, ಬೆಳೆ ದರ್ಶಕ ಆಪ್, ಬೆಳೆ ಸಮೀಕ್ಷೆ ತಂತ್ರಾಂಶಗಳಲ್ಲಿ ರೈತರಿಗೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗಿದೆ. |

**ಕೃಇ 34 ಕೃಕೈಲು 2020**

(ಬಿ.ಸಿ.ಪಾಟೀಲ್) 9/3/2020

ಕೃಷಿ ಸಚಿವರು